## ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಸ್ಥಳಃ ಅರಕಲಗೂಡು

ಸಿಸಿ ನಂ. ಃ**952/2022**

ದಿನಾಂಕಃ **07/03/2024**

ಪಿರ್ಯಾದಿದಾರರುಃ ಕೊಣನೂರು ಪೊಲೀಸ್

ವಿರುದ್ಧ

ಆರೋಪಿ ಃ ಸಂತೋಷ

## ದೋಷಾರೋಪಣೆ

ನಾನು ಶ್ರೀಮತಿ. ಚೇತನಾ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅರಕಲಗೂಡು, ಆರೋಪಿಯಾದ

**ಆರೋಪಿ** ಸಂತೋಷ ಬಿನ್ ರಾಮಯ್ಯ,
ಸುಮಾರು 29 ವರ್ಷ,
ವಾಸಃ ದೊಡ್ಡಹಳ್ಳಿ ಗ್ರಾಮ,
ದೊಡ್ಡಮಗ್ಗೆ ಹೋಬಳಿ,
ಅರಕಲಗೂಡು ತಾಲ್ಲೂಕು,
ಹಾಸನ ಜಿಲ್ಲೆ.

## ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆ ಮಾಡುತ್ತೇನೆ.

ಕೊಣನೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ದೊಡ್ಡಹಳ್ಳಿ ಗ್ರಾಮದಲ್ಲಿ ಸಾಕ್ಷಿ-1 ಗಿರೀಶರವರಿಗೆ ಸೇರಿದ ಸರ್ವೆ ನಂಬರ್ 15/5 ರಲ್ಲಿ 23 ಗುಂಟೆ ಜಮೀನಿದ್ದು, ಸದರಿ ಜಮೀನಿನ ವಿಚಾರದಲ್ಲಿ ಆರೋಪಿಯಾದ ನಿಮಗೂ ಮತ್ತು ಸಾಕ್ಷಿ-1 ರವರಿಗೂ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ನ್ಯಾಯಾಲಯವು ಸಾಕ್ಷಿ-1 ರವರ ಪರ ಆದೇಶ

ನೀಡಿದ್ದರ ಮೇರೆಗೆ ಕಂದಾಯ ಇಲಾಖೆ ಅಧಿಕಾರಿಗಳು ಸದರಿ ಜಾಗವನ್ನು ಅಳತೆ ಮಾಡಿ ಸಾಕ್ಷಿ-1 ರವರಿಗೆ ಬಿಡಿಸಿಕೊಟ್ಟಿದ್ದು ಕೆಲವು ವರ್ಷಗಳಿಂದ ಸದರಿ ಜಮೀನು ಸಾಕ್ಷಿ-1 ರವರ ಅನುಭವದಲ್ಲಿದ್ದು ದಿನಾಂಕಃ13-04-2022 ರಂದು ಬೆಳಿಗ್ಗೆ 9.00 ಗಂಟೆಯ ಸಮಯದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ನಿಮ್ಮ ಬಾಬ್ತು ಕೆಎ-13 ಟಿಬಿ-9063 ರ ಟ್ರಾಕ್ಟರ್ ನಲ್ಲಿ ಉಳುಮೆ ಮಾಡಿಸುತ್ತೇನೆಂದು ತಿಳಿಸಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂಃ 447 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಆದ್ದರಿಂದ ಸದರಿ ಅಪರಾಧವು ನನ್ನ ವಿಚಾರಧೀನ ಅಪರಾಧವಾಗಿದೆ.

(ಈ ಆರೋಪಣೆಯ ಅಂಶಗಳನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿ ತಿದ್ದುಪಡಿ ಮಾಡಿದ ನಂತರ ಸದರಿ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಈ ಹೊತ್ತು ದಿನಾಂಕ 07 ಮಾರ್ಚ್ -2024 )

ಶ್ರೀಮತಿ. ಚೇತನಾ
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ಅರಕಲಗೂಡು.